ನಾವು ನಿಯೋಗ ತೆಗೆದುಕೊಂಡು ಹೋಗುವುದಕ್ಕೂ ಸಿದ್ದರಾಗಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಎಷ್ಟು ದುಡ್ಡು ಅಲಾಟ್ ಮಾಡಿತ್ತು, ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ನೀರಾವರಿ ಆಗಿದೆ ಎಂದು ಹೇಳಿದ್ದೇನೆ. ಅದರ ಬಗ್ಗೆ ಸಮಗ್ರವಾಗಿ ಒಂದು ತನಿಖೆ ಮಾಡಿಸಿ ಸ್ವಾಮಿ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೇ, ಅವರು ಏನೇನು ವಿಚಾರಗಳನ್ನು ಹೇಳಿದ್ದಾರೆ, ಸಮಗ್ರವಾದ ತನಿಖೆ ಮಾಡಿ, ಇದೇ ಸದನದಲ್ಲಿ ಒಂದು ಹೇಳಿಕೆ ಕೂಡ ಮಾಡುತ್ತೇನೆ.

9. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ (ಮುಂದು)

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನಾನು ನೀರಾವರಿ ಬಗ್ಗೆ ಮಾತನಾಡುತ್ತಾ ಇದ್ದೆ. ನೀರಾವರಿ ಬಗ್ಗೆ ಏನು ಸನ್ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ, ಈ ಸಲ ಬಜೆಟ್‌ನಲ್ಲಿ ಅಂತಹ ವಿಶೇಷವಾದುದೇನೂ ಇಲ್ಲ. ಏಕೆಂದರೆ, ಪ್ರತಿ ಸಲ ಕೊಟ್ಟ ಹಾಗೆ ಅಲೋಕೇಷನ್ ಕೊಟ್ಟುಕೊಂಡು ಹೋಗಿದ್ದಾರೆ. ದುರ್ದೈವ ಎಂದರೆ, ಈ ನೀರಾವರಿಯನ್ನು ಎರಡು ವಲಯ ಮಾಡಿದ್ದಾರೆ. ಕೃಷ್ಣಾ ಭಾಗ್ಯ ಜಲನಿಗಮ ಎಂದು ಒಂದು ವಲಯಕ್ಕೆ ಹೆಸರಿಟ್ಟಿದ್ದಾರೆ, ಕಾವೇರಿ ಎಂದು ಇನ್ನೊಂದಕ್ಕೆ ಇಟ್ಟಿದ್ದಾರೆ. ನಾನು ಈ ಸಭೆಯಲ್ಲಿ ನಿಂತುಕೊಂಡು ಕೇಳುತ್ತೇನೆ. ಅಂದಿನ ಮುಖ್ಯಮಂತ್ರಿಗಳು ಸುಮಾರು ಐದು ಸಾವಿರ ಕೋಟಿ ರೂಪಾಯಿಗಳನ್ನು ನಾನು...

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸಿ.ಇ.ಟಿ. ಬಗ್ಗೆ ಒಂದು ಹೇಳಿಕೆ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗಲಿ ಸಾರ್.

10. ಮುಖ್ಯಮಂತ್ರಿಗಳ ಹೇಳಿಕೆ

ಸಿ.ಇ.ಟಿ. ಬಗ್ಗೆ ನಿರ್ಣಯ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಈ ಸಿ.ಇ.ಟಿ. ಯಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಈಗಾಗಲೇ ನಾವು ಎರಡು ಸುತ್ತಿನ ಮಾತುಕತೆ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿದ್ದೇವೆ ಮತ್ತೆ ಮ್ಯಾನೇಜ್‌ಮೆಂಟ್ ಜೊತೆಯಲ್ಲೂ ಕೂಡ ಮಾತನಾಡಿದ್ದೇವೆ. ಕೊನೆಗೆ, ವಿರೋಧ ಪಕ್ಷದ ನಾಯಕರ ಸಮೇತ ಎಲ್ಲಾ ಮ್ಯಾನೇಜ್‌ಮೆಂಟಿನವರ ಜೊತೆ ಮತ್ತೆ ಅಧಿಕಾರಿಗಳ ಜೊತೆಯಲ್ಲಿ ಸಮಗ್ರವಾದಂಥ ಚರ್ಚೆ ಮೂರು ದಿವಸಗಳ ಹಿಂದೆ ಆಗಿದೆ. ಸುಪ್ರೀಂ ಕೋರ್ಟಿನ ಆದೇಶ ಇದೆ. ಆದರೂ ಕೂಡ ಸರ್ಕಾರದ ನಿರ್ಧಾರ 75:25 ಏನು ಇದೆ, ಅದರ ಬಗ್ಗೆ ಈ ಸದನದಲ್ಲಿ ನಾನು ಒಂದು ನಿರ್ಣಯವನ್ನು ಮಂಡಿಸುತ್ತಿದ್ದೇನೆ. ಈ ನಿರ್ಣಯದ ಮೇಲೆ ಚರ್ಚೆ ಕೂಡ ಆಗಬೇಕಾಗಿದೆ. ಇವತ್ತು ಕರ್ನಾಟಕದ ವಿಧಾನಸಭೆ 5 ಕೋಟಿ 45 ಲಕ್ಷ ಜನರಿಗೆ ಒಂದು ಸಂದೇಶ ಕೊಡಬೇಕಾಗಿದೆ. ಈ ಸರ್ಕಾರ ಬಡವರ ಬಗ್ಗೆ ಇದೆ, ಬಡವರ ಬಗ್ಗೆ ಚಿಂತನೆ ಮಾಡುತ್ತಾ ಇದೆ ಎನ್ನತಕ್ಕಂಥ ಅಭಿಪ್ರಾಯ ಮೂಡಿಸತಕ್ಕ ರೀತಿಯಲ್ಲಿ ಈ ಸದನದಲ್ಲಿ ನಿರ್ಣಯವನ್ನು ಮಂಡಿಸುತ್ತಾ ಇದ್ದೇನೆ. ಇದರ ಬಗ್ಗೆ ಚರ್ಚೆಯಾಗಲೇ, ಇವತ್ತೇ ಎಂದಲ್ಲ, ನಾಳೆ ಚರ್ಚೆಯಾಗಲಿ. ಏಕೆಂದರೆ 31ನೇ ತಾರೀಖಿನೊಳಗೆ ಇದರ ಇತ್ಯರ್ಥ

ಮಾಡಬೇಕಾಗಿದೆ. ಯಾವ ರೀತಿಯಾಗಿ ಸಲಹೆ ಸೂಚನೆಗಳು ಬರುತ್ತವೆ, ನಾವು ಈ ನಿರ್ಣಯ ಮಂಡಿಸಿದ ಮೇಲೆ, ತಮ್ಮೆಲ್ಲರ ಸಲಹೆ ಸೂಚನೆಗಳ ಮೇಲೆ ಈ ಅಧಿವೇಶನದಲ್ಲಿ ಒಮ್ಮತದ ಅಭಿಪ್ರಾಯದ ಮೇರೆಗೆ ಸರ್ಕಾರ ಮುಂದೆ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ರೀತಿಯಲ್ಲಿ ನಾನು ನಿರ್ಣಯವನ್ನು ಮಂಡಿಸುತ್ತಿದ್ದೇನೆ.

ನಿರ್ಣಯ

"2004–05ನೇ ಶೈಕ್ಷಣಿಕ ವರ್ಷದಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ವಿದ್ಯಾರ್ಥಿಗಳ ಆಯ್ಕೆಗೆ ಸಂಬಂಧಿಸಿದ ವಿಷಯದಲ್ಲಿ ಉದ್ಭವಿಸಿದ ತುರ್ತು ಅಗತ್ಯದ ಹಿನ್ನೆಲೆಯಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯದ ವಿಶಾಲ ಪೀಠವು ವೃತ್ತಿ ಶಿಕ್ಷಣ ಕಾಲೇಜುಗಳಿಗೆ ಪ್ರವೇಶದ ವಿಷಯದಲ್ಲಿ ಅಂತಿಮ ನಿರ್ಣಯವನ್ನು ಕೊಡುವುದನ್ನು ಕಾಯ್ದಿರಿಸಿ ಮತ್ತು / ಅಥವಾ ಟಿ.ಎಂ.ಎ. ಪೈ ಪ್ರಕರಣದಲ್ಲಿ ನಿರ್ದೇಶಿಸಿದಂತೆ ಈ ವಿಷಯದ ಮೇಲೆ ಕೇಂದ್ರ ಸರ್ಕಾರ ಒಂದು ಕಾನೂನನ್ನು ತರುವುದನ್ನು ಕಾಯ್ದಿರಿಸಿ ರಾಜ್ಯದ ವೈದ್ಯಕೀಯ, ದಂತವೈದ್ಯ ಮತ್ತು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶಕ್ಕೆ ಸಂಬಂಧಿಸಿದ ವಿಷಯದಲ್ಲಿ ಅನೇಕ ನ್ಯಾಯಾಲಯಗಳ ನಿರ್ಣಯಗಳು ಬಾಕಿ ಇರುವ ಕಾರಣದಿಂದಾಗಿ ಉಂಟಾದ ಈ ವಿಷಯದಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಮತ್ತು ಮಧುಸಿಂಗ್ ಪ್ರಕರಣದಲ್ಲಿ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶವನ್ನು ಅಂತ್ಯಗೊಳಿಸಲು ಸರ್ವೋಚ್ಚ ನ್ಯಾಯಾಲಯವು ನಿಗದಿಪಡಿಸಿರುವ ಅಂತಿಮ ಗಡುವಿನಲ್ಲೇ ಪ್ರವೇಶ ಪ್ರಕ್ರಿಯೆ ಅಂತಿಮಗೊಳಿಸಲು ಮತ್ತು ಈ ಪ್ರವೇಶಗಳಿಗೆ ಒಂದು ಸಮಂಜಸ ಫೀಜನ್ನು ನಿಗದಿಪಡಿಸಲು ರಾಜ್ಯ ಸರ್ಕಾರವು ಕಾನೂನಿನ ಮೂಲಕ, ಅವಶ್ಯವಾದರೆ, ವಿಶೇಷ ಶಾಸನರಚನೆಯ ಮೂಲಕ 2004–05ರ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ, ದಂತವೈದ್ಯ ಮತ್ತು ಇಂಜಿನಿಯರಿಂಗ್ ಕೋರ್ಸುಗಳ ವಿದ್ಯಾರ್ಥಿಗಳ ಆಯ್ಕೆಯನ್ನು ಸರ್ಕಾರದ ಮತ್ತು ಮ್ಯಾನೇಜ್‌ಮೆಂಟ್‌ಗಳ ನಡುವಿನ ಸೀಟು ಹಂಚಿಕೆಯನ್ನು ಅನುಕ್ರಮವಾಗಿ 75:25ರ ಅನುಪಾತದಲ್ಲಿ ಒಂದು ಸಮಯದ ಕ್ರಮವಾಗಿ ನಿಯಂತ್ರಿಸತಕ್ಕದ್ದು ಎಂದು ಈ ಸದನವು ನಿರ್ಣಯಿಸುತ್ತದೆ."

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಮುಖ್ಯ ಮಂತ್ರಿಗಳೇ, ಸುಪ್ರೀಂ ಕೋರ್ಟ್ ಒಂದು ನಿರ್ಣಯ 50:50 ಎಂದಿದೆ, ಅದಕ್ಕೋಸ್ಕರ ಈ ಮನೆಗೆ ತಿದ್ದುಪಡಿಯನ್ನು ತರಲು ಅಧಿಕಾರವಿದೆ, ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ, ಇದನ್ನು 75:25 ಎಂದು ಮಾಡಿದ್ದೀರಿ. ಇದು ಸ್ವಾಗತಾರ್ಹವಾದ ಸಂಗತಿ. ಫೀ ಸ್ಟ್ರಕ್ಚರ್ ಬಗ್ಗೆ ಮುರುಗೋಡು ಸಮಿತಿ ರಾಜೀನಾಮೆ ಕೊಟ್ಟಾಗಿದೆ. ಫೀಸ್ಟ್ರಕ್ಚರ್ ಬಗ್ಗೆ ಮುಖ್ಯಮಂತ್ರಿಗಳು ಮತ್ತೆ ಕುಳಿತು ಸಮಾಲೋಚನೆ ಮಾಡಿ; ಏಕೆಂದರೆ 75–25ರ ಅನುಪಾತದ ಮೇಲೆ ಸೀಟು ಹಂಚುವುದು ಒಂದಾಯಿತು, ಬಹಳ ಮುಖ್ಯವಾಗಿರುವುದು ಫೀ ಸ್ಟ್ರಕ್ಚರ್ ಬಗ್ಗೆ. ಅದಕ್ಕೇನಾದರೂ ಮತ್ತೆ ಸಮಾಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರುವವರಿದ್ದೀರಾ ಹೇಗೆ? ಅದರ ಬಗ್ಗೆ ಇಲ್ಲೇನೂ ಪ್ರಸ್ತಾಪವಿಲ್ಲ. ಮೆಡಿಕಲ್, ಇಂಜಿನಿಯರ್ ಫೀಸ್ಟ್ರಕ್ಚರ್ ಬಗ್ಗೆ ತಾವೇನು ಯೋಚನೆ ಮಾಡುತ್ತಿದ್ದೀರಿ? ಅಮೇಲೆ ಒಂದು ನಿರ್ಧಾರಕ್ಕೆ ಬಂದು ಅದನ್ನು ಪ್ರಕಟ ಮಾಡುತ್ತೀರಾ? ರಾಜ್ಯದ ಸಿಇಟಿ ಮೂಲಕ ಏನು ಸೀಟುಗಳನ್ನು ಪಡೆಯಬೇಕಾಗಿದೆ, ಆ ವಿದ್ಯಾರ್ಥಿಗಳಿಗೆ 75–25 ಅನುಪಾತದ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳುತ್ತದೆನ್ನುವುದು ಬಿಟ್ಟರೆ, ಬಹಳ ಮುಖ್ಯವಾಗಿ ಫೀ ಬಗ್ಗೆ ಚರ್ಚೆಯಾಗುತ್ತಿದೆ, ಅದರ

ಬಗ್ಗೆ ಮುರುಗೋಡ್‌ರವರು ರಾಜೀನಾಮೆ ಕೊಟ್ಟಿದ್ದಾರೆ, ಆದ್ದರಿಂದ ಈಗ ಯಾವ ರೀತಿಯಾಗಿ ಫೀಯನ್ನು ನಿಗದಿ ಮಾಡುತ್ತೀರಿ? ಇದರ ಬಗ್ಗೆ ಏನಾದರೂ ಪ್ರಸ್ತಾಪ ಮಾಡಿದ್ದೀರಾ ಹೇಗೆ? ಇದರ ಬಗ್ಗೆ ನನಗೆ ಸ್ಪಷ್ಟವಾದ ಉತ್ತರಬೇಕು.

ಶ್ರೀ ವಾಟಾಳ್ ನಾಗರಾಜ್ : ಖಾಸಗಿ ಸಂಸ್ಥೆಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುತ್ತೇವೆಂದು ಒಂದೆ ಲೈನ್‌ನಲ್ಲಿ ಹೇಳಿಬಿಡಿ ಮುಗಿದು ಹೋಗಲಿ, ಮೆಡಿಕಲ್ ಕಾಲೇಜ್ ಹಾಗೂ ಇಂಜಿನಿಯರಿಂಗ್ ಕಾಲೇಜ್‌ನವರನ್ನು ಕರೆದು ಕೇಳಿ ಮಾಡುವ ಬದಲು ಒಂದು ಕ್ರಾಂತಿಕಾರಕವಾದ ಹೆಜ್ಜೆಯನ್ನು ಇಟ್ಟು ಬಿಡಿ. ಈಗ ಇದೊಂದು ನಿರ್ಣಯ ಬಂದಿರುವುದು ಇತಿಹಾಸ, ಸಂತೋಷ ಪಡುತ್ತೇನೆ, ಈ ನಿರ್ಣಯವನ್ನು ಬಹಳ ಸ್ವಾಗತ ಮಾಡುತ್ತೇನೆ, ಇಡೀ ರಾಜ್ಯ ಎಲ್ಲಾ ಜನರು ಸ್ವಾಗತ ಮಾಡುತ್ತಾರೆ. ನಾನು ಹೇಳುವುದೇನೆಂದರೆ, ಇದರ ಜೊತೆಯಲ್ಲಿ ಒಂದೇ ಲೈನ್‌ನಲ್ಲಿ ನಾವು ತೆಗದುಕೊಂಡಿದ್ದೇವೆ ಎಷ್ಟೇ ಕೋಟಿ ಹಣವಾದರೂ ತೀರಿಸುತ್ತೇವೆ, ನಾವು ಅದರ ಬಿಲ್ಡಿಂಗ್ ಇತ್ಯಾದಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ, ಧೈರ್ಯವಾಗಿ ಹೇಳಿಬಿಡಿ. ಇಲ್ಲಿ ತೀರ್ಮಾನವಾಗಲಿ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇನು ಒಂದು ನಿರ್ಣಯವನ್ನು ಮಂಡಿಸಿದ್ದಾರೆ, ಮಾನೇಜ್‌ಮೆಂಟ್ ಮತ್ತು ಸರ್ಕಾರದ ಸೀಟು ಎಷ್ಟು ಹಂಚಿಕೆಯಾಗಬೇಕೆನ್ನುವ ಬಗ್ಗೆ ಇಲ್ಲಿ 75–25ರ ಅನುಪಾತಕ್ಕೆ ಸಂಬಂಧಪಟ್ಟಂತೆ ನಿರ್ಣಯವನ್ನು ತಂದಿದ್ದೀರಿ. ಸುಪ್ರೀಂ ಕೋರ್ಟ್‌ನ 11 ನ್ಯಾಯಾಧೀಶರ ತೀರ್ಪು ಮತ್ತು 5 ನ್ಯಾಯಾಧೀಶರ ತೀರ್ಪು, ಅದರ ಆಧಾರದ ಮೇಲೆ ಇವತ್ತೇನು 75–25 ಅನುಪಾತದ ಬಗ್ಗೆ ತಾವು ನಿರ್ಣಯವನ್ನು ಕೈಗೊಂಡಿದ್ದೀರಿ. ಆದರೆ ಕಳೆದ ಎರಡು ದಿನಗಳಿಂದ ಇಲ್ಲಿಯವರೆಗೆ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಬಗ್ಗೆ ತಾವು ಮಾತುಕತೆಗಳನ್ನು ನಡೆಸಿಕೊಳ್ಳುತ್ತಾ ಬಂದಿದ್ದೀರಿ, ಅದರ ಪರಿಣಾಮ ಏನೂ ಆಗಲಿಲ್ಲ, ನಾವು ಕೊನೆಗೆ ಎಲ್ಲಿಗೆ ಬಂದೆವೆಂದರೆ, ಮತ್ತೆ ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ನಡೆದುಕೊಳ್ಳುವುದು. ಈ ನಿರ್ಧಾರವನ್ನು ಮೊದಲೇ ತೆಗೆದುಕೊಳ್ಳಬೇಕಾಗಿತ್ತು, ಇಷ್ಟು ದಿವಸ ಏನಾಗಿದೆ ಎಂದರೆ ಒಂದು ಮೂರ್ನಾಲ್ಕು ದಿವಸ ಕೌನ್ಸಿಲಿಂಗ್ ಪ್ರಾರಂಭ ಮಾಡಿ ಮತ್ತೆ ಮುಂದಕ್ಕೆ ಹಾಕಿದಿರಿ, ಪರಿಸ್ಥಿತಿ ಎಲ್ಲಿಗೆ ಬಂತು ಎಂದರೆ ನಮ್ಮಲ್ಲಿ ಎಲ್ಲಿಗೆ ಬಂತೋ ಸಂಗಯ್ಯ ಎಂದರೆ ಅಲ್ಲಿಗೆ ಬಂತು ಎಂದು ಹೇಳುತ್ತಾರೆ, ಅದೇ ಸ್ಟೇಟಸ್‌ಕೋ ಪರಿಸ್ಥಿತಿ. ಈ ನಿರ್ಣಯವನ್ನು ನಾವು ಎರಡು ತಿಂಗಳ ಹಿಂದೆ ಪಾಸ್ ಮಾಡಿಕೊಳ್ಳಬಹುದಾಗಿತ್ತು, ಸರ್ಕಾರ ನಾವು ಇಷ್ಟಕ್ಕೆ ಬದ್ದರಿದ್ದೇವೆ, ಸುಪ್ರೀಂ ಕೋರ್ಟ್ ತೀರ್ಪು ಹೇಗೆ ಅದರ ಪ್ರಕಾರ ನಾವು ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಹುದಾಗಿತ್ತು, ಗಟ್ಟಿಯಾಗಿ ನಿಲ್ಲಬೇಕಾಗಿತ್ತು, ಅದು ಆಗಲಿಲ್ಲ, ಕೊನೆಗೆ ನಾವು ಇಲ್ಲಿಗೇ ಬಂದೆವು. ನಾನು ಮತ್ತೊಂದು ಪ್ರಮುಖವಾಗಿ ಹೇಳುವುದೇನೆಂದರೆ ಫೀ ಸ್ಟ್ರಕ್ಚರ್ ಬಗ್ಗೆ ಇವತ್ತು ನ್ಯಾಯಾಧೀಶರಾದ ಮುರಗೋಡ್ ಸಮಿತಿ ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ರಚನೆಯಾಯಿತು, ಅವರು ಫೀ ಸ್ಟ್ರಕ್ಚರ್ ಬಗ್ಗೆ ಕೆಲವೊಂದು ಘೋಷಣೆಗಳನ್ನು ಮಾಡಿದರು, ಆಮೇಲೆ ಅದು ಸರಿಯಲ್ಲವೆಂದು ಮ್ಯಾನೇಜ್ ಮೆಂಟ್‌ರವರು ಹೇಳಿದರು. ವಿದ್ಯಾರ್ಥಿಗಳಿಂದ ಇಷ್ಟೊಂದು ಫೀಯನ್ನು ಕಟ್ಟಲು ಸಾಧ್ಯವಿಲ್ಲವೆನ್ನುವುದನ್ನು ಯಾರು 100, 200 ರ್‍ಯಾಂಕ್‌ಗಳನ್ನು ಪಡೆದುಕೊಂಡಿದ್ದರು ಅವರು ಕೌನ್ಸಿಲಿಂಗ್‌ಗೆ ಬಂದಾಗ ಅಡ್ಮಿಷನ್ ಕೊಟ್ಟಾಗ ನಮಗೆ ಇಷ್ಟು ಫೀ ತುಂಬಲಾಗುವುದಿಲ್ಲವೆಂದು ರಿಜೆಕ್ಟ್ ಮಾಡಿ ಹೋದರು. ಕೊನೆಗೆ ಎಲ್ಲಿಗೆ ಬಂತು? ಮುರುಗೋಡ್‌ರವರು ರಾಜೀನಾಮೆ

ಕೊಟ್ಟು ಹೋದರು, ಈಗ ಫೀ ಸ್ಟ್ರಕ್ಚರ್ ಬಗ್ಗೆ ಪರಿಸ್ಥಿತಿ ಏನು? ಈ 75:25 ಆಯಿತು, ಆ ಫೀ ಸ್ಟ್ರಕ್ಚರ್ ಬಗ್ಗೆ ಏನೆಂಬುದು ಏನೂ ಇದರಲ್ಲಿ ಇಲ್ಲ, ಅದನ್ನೂ ಕೂಡ ಈ ನಿರ್ಣಯದಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ. ನಾವು ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ನೀವು ಯಾವುದೇ ಗೈಡ್‌ಲೈನ್ಸ್ ಹಾಕಿ, ಫೀ ಸ್ಟ್ರಕ್ಚರ್ ಮಾಡಿ ಅದಕ್ಕೆ ಸದನ ಸಂಪೂರ್ಣವಾದ ಒಪ್ಪಿಗೆಯನ್ನು ಕೊಡುವುದಕ್ಕೆ ತಯಾರಿದೆ. ಆದರೆ ಇದರ ಬಗ್ಗೆ ಕ್ಲಾರಿಟಿ ಇಲ್ಲ, ಹೀಗಾಗಿ ಇವತ್ತು ಮತ್ತೆ ಗೊಂದಲ ಮತ್ತೆ ಮುಂದುವರೆಯುತ್ತದೆ, ಇವತ್ತೇನು ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಏನು ನಿರ್ಣಯವನ್ನು ಮಂಡನೆ ಮಾಡಿದ್ದೀರಿ ಇದಕ್ಕೆ ಪೂರಕವಾಗಿ ಫೀ ಸ್ಟ್ರಕ್ಚರ್ ಬಗ್ಗೆಯೂ ಇಲ್ಲಿ ಮೂಡಿಸಬೇಕಾಗುತ್ತದೆ, ಇಲ್ಲದಿದ್ದರೆ ಗೊಂದಲ ಹೀಗೆಯೇ ಮುಂದುವರೆಯುತ್ತದೆ. ತಮ್ಮ ಕಡೆಯಿಂದ ಹೊಸ ಬಿಲ್ ಅನ್ನು ತರುತ್ತೇವೆನ್ನುವ ಮಾತೂ ಕೂಡ ಬಂತು, ಅದರ ಬಗ್ಗೆ ಸರ್ಕಾರದ ನಿರ್ಣಯವೇನು? ನಿಲುವೇನು? ಇವತ್ತು ಹೊಸದಾಗಿ ಕಾನೂನು ತೆಗೆದುಕೊಂಡು ಬರುತ್ತೀರೋ ಹೇಗೆ ಅಥವಾ ಈ ಬಗ್ಗೆ ಸುಪ್ರೀಂ ಕೋರ್ಟ್‌ನ ತೀರ್ಮಾನ ವಾದುದ್ದರಿಂದ, ಆಲ್ ಇಂಡಿಯಾ ಬೇಸಿಸ್ ಮೇಲೆ ಇದಾಗುವುದರಿಂದ, ಈ ಬಗ್ಗೆ ನಾಳೆ ಪಾರ್ಲಿಮೆಂಟ್‌ನಲ್ಲ ಹೊಸ ಕಾನೂನನ್ನು ತರಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಅಲ್ಲಿ ಹೊಸದಾಗಿ ಈ ಬಗ್ಗೆ ಕಾನೂನನ್ನು ನಿರೂಪಣೆ ಮಾಡುವುದಕ್ಕೆ ಏನಾದರೂ ಪ್ರಯತ್ನ ರಾಜ್ಯ ಸರ್ಕಾರದಿಂದ ಆಗುತ್ತದೆಯೊ ಹೇಗೆ ಎನ್ನುವುದೂ ಸ್ಪಷ್ಟವಾಗಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲವೂ ಗೊಂದಲ, ಏಕೆಂದರೆ ಅವರು ಇದನ್ನು ಚಾಲೆಂಜ್ ಮಾಡಿ ಕೋರ್ಟ್‌ಗೆ ಹೋಗುತ್ತಾರೆ, ಆ ಕೌನ್ಸಿಲಿಂಗ್ ಮುಂದೆ ಹೋಗುತ್ತಿದೆ. ಹೀಗಾಗಿ ಎಲ್ಲಾ ಈ ಗೊಂದಲ ಮುಂದುವರೆಯುತ್ತಿದೆ. ನಾನು ದಯವಿಟ್ಟು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ, ಈ ಬಗ್ಗೆ ನೀವು ಬೋಲ್ಡ್ ಸ್ಟೆಪ್ ತೆಗೆದುಕೊಳ್ಳಿ, ಕಠಿಣ ನಿರ್ಧಾರಗಳನ್ನು ನೀವು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಗೊಂದಲ ನಿರ್ಮಾಣವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಚರ್ಚೆ ಪ್ರಾರಂಭವಾಗಿದೆಯೇ ಅಥವಾ ಮುಂದೆ ಚರ್ಚೆಗೆ ತೆಗೆದುಕೊಳ್ಳುವುದೆಂದಾದರೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ, ಇವತ್ತೇ ಚರ್ಚೆ ಎನ್ನುವುದಾದರೆ ನಾವು ಚರ್ಚೆಯಲ್ಲಿ ಪಾಲ್ಗೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅರ್ಧಂಬರ್ಧ ಮಾತನಾಡುವುದು, ಮತ್ತೊಂದು ದಿವಸ ಚರ್ಚೆ ಎನ್ನುವುದಾದರೆ ಇದು ಸರಿಯಲ್ಲ, ಒಟ್ಟಿಗೆ ನಿರ್ಣಯದ ಮೇಲೆ ಚರ್ಚೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಚರ್ಚೆ ಪ್ರಾರಂಭ ಮಾಡುವುದಾದರೆ ಈಗಲೇ ಪ್ರಾರಂಭ ಮಾಡಿ ಒಟ್ಟಿಗೆ ಮಾಡೋಣ, ಸಮಯ ನಿಗಧಿ ಮಾಡಿಬಿಡಿ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ (ಅಂಕೋಲ) : ಚರ್ಚೆಯನ್ನು ಈಗಲೇ ಪ್ರಾರಂಭ ಮಾಡುವುದು ಒಳ್ಳೆಯದು ಏಕೆಂದರೆ, ಒಂದೊಂದು ದಿವಸ, ಒಂದೊಂದು ನಿಮಿಷ ತಡವಾದರೂ ಕೂಡ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಬಹಳ ಗೊಂದಲದಲ್ಲಿದ್ದಾರೆ, ಆತಂಕದಲ್ಲಿದ್ದಾರೆ. ಈಗ ಸರ್ಕಾರ 75–25 ಅನುಪಾತ ಸೀಟು ಹಂಚಿಕೆಯ ನಿರ್ಣಯವನ್ನು ಸ್ವಾಗತ ಮಾಡುತ್ತೇವೆ, ಮುರುಗೋಡು ಸಮಿತಿ ಒಂದು ಕಡೆ ರಾಜಿನಾಮೆ ಕೊಟ್ಟಿದೆ, ಈಗ ವೆಂಕಟರಾಮನ್ ಸಮಿತಿ ಅಡ್ಮಿಷನ್ ಬಗ್ಗೆ ನಿರ್ವಹಣೆ ಮಾಡಬೇಕಾದ ಸಮಿತಿ, 75–25ನ್ನು ವೆಂಕಟರಾಮನ್ ಸಮಿತಿ ನಿರ್ವಹಣೆ ಮಾಡುತ್ತದೆಯೋ ಇಲ್ಲವೋ ಎನ್ನುವುದೂ ಕೂಡ ಬೇಕಾಗುತ್ತದೆ ಏಕೆಂದರೆ. ಅಡ್ಮಿಷನ್ ಬಗ್ಗೆ ಎಷ್ಟು

ಮುಖ್ಯವೋ, ಫೀ ಸ್ಟ್ರಕ್ಚರ್ ಬಗ್ಗೆಯೂ ಕೂಡ ಅಷ್ಟೆ ಪ್ರಾಮುಖ್ಯವಾದ ವಿಚಾರವಿದೆ. ಮಾನ್ಯ ನಮ್ಮ ನಾಯಕರು ಹೇಳಿದಂತೆ ಅಡ್ಮಿಷನ್‌ಗೆ ಸಂಬಂಧಿಸಿದಂತೆ 75–25 ಎಂದು ಹೇಳಲಾಗಿದೆ, ಇದನ್ನು ವೆಂಕಟರಾಮನ್ ಸಮಿತಿ ಒಪ್ಪಿಕೊಳ್ಳುತ್ತದೆಯೆ? ಅದರ ನಿರ್ವಹಣೆಯನ್ನು ಆ ಸಮಿತಿಯು ಮಾಡುತ್ತದೆಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅದರ ಜೊತೆಗೆ ಫೀ ಸ್ಟ್ರಕ್ಚರ್ ಬಗ್ಗೆ 65 ಕೋಟಿ ರೂಪಾಯಿಗಳನ್ನು ಸರ್ಕಾರ ತುಂಬಿ ಕೊಡುತ್ತೇವೆಂದು ಹೇಳಿದರೆ ಸಮಸ್ಯೆ ಬಗೆಹರಿಯಬಹುದು, ಅದು ಇಲ್ಲವೆಂದರೆ ಮುರುಗೋಡು ಸಮಿತಿ ಏನು ಕಾಮನ್ ಫೀ ಸ್ಟ್ರಕ್ಚರ್ ಮಾಡಿ ನಮಗೆ ಹೇಳಿದೆ, ಅದರ ಪ್ರಕಾರವೇ ಅಡ್ಮಿಷನ್ ಮಾಡಿಸಿಕೊಳ್ಳದೆ ಹೋದರೆ ಮತ್ತೆ ಯಾವ ವಿದ್ಯಾರ್ಥಿಗಳಿಗೂ ಈ ಶಿಕ್ಷಣವನ್ನು ಪಡೆಯುವುದಕ್ಕಾಗುವುದಿಲ್ಲವೆನ್ನುವ ಪರಿಸ್ಥಿತಿ ಬರುತ್ತದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಎಲ್ಲರೂ ಇದ್ದೀರಿ, ಈ ಬಡ ವಿದ್ಯಾರ್ಥಿಗಳಿಗೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ 65 ಕೋಟಿ ರೂಪಾಯಿಗಳನ್ನು ತುಂಬಿಕೊಡುತ್ತೇವೆನ್ನುವ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಅವರ ರಕ್ಷಣೆಗೆ ಬರಬೇಕೆನ್ನುವ ಆಗ್ರಹವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಇಷ್ಟೆ, ತಾವೇನು ಈ ಖಾಸಗಿ ಕಾಲೇಜುಗಳು ಸೀಟು 75–25 ಅನುಪಾತದಲ್ಲಿ ಹಂಚಿಕೆಯಾಗಬೇಕೆಂದು ನಿರ್ಣಯವನ್ನು ತಂದಿದ್ದೀರಿ ಅದನ್ನು ಸ್ವಾಗತ ಮಾಡುತ್ತೇವೆ, ಆದರೆ ಈ ರಾಜ್ಯದ ಯಾವುದೇ ಮೆಡಿಕಲ್, ಇಂಜಿನಿಯರ್ ಕೋರ್ಸ್‌ಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಈ ಹೇಳಿಕೆಯಿಂದ ಸಮಾಧಾನವಾಗುವುದಿಲ್ಲ, ಅವರು ಬಹಳ ಮುಕ್ತವಾಗಿ ಕೇಳುತ್ತಿರುವುದು ಫೀ ಸ್ಟ್ರಕ್ಚರ್. ಇವತ್ತು ಮುರುಗೋಡ್‌ರವರು ಇಂಜಿನಿಯರ್‌ಗೆ 30,000 ರೂ. ಮೆಡಿಕಲ್ ಒಂದು ಕ್ಯಾಟಗರಿಗೆ 1.52 ಲಕ್ಷ ರೂ. ಇನ್ನೊಂದು ಕ್ಯಾಟಗರಿಗೆ 2.52 ಲಕ್ಷ ರೂ ಎಂದೇನು ನಿಗದಿ ಮಾಡಿದ್ದಾರೆ, ಆ ವ್ಯತ್ಯಾಸವನ್ನು ತುಂಬುವುದರ ಬಗ್ಗೆ ಇದಕ್ಕೇನು 65 ಕೋಟಿ ರೂ. ಬೇಕಾಗಿದೆ ಅದನ್ನು ಸರ್ಕಾರ ತೆಗೆದು ಇಡದಿದ್ದರೆ, ಈ 75:25 ಅನುಪಾತದಿಂದ ಈ ರಾಜ್ಯದ ಯಾವುದೇ ಯುವಕರಿಗೆ ಅನುಕೂಲವಾಗುವುದಿಲ್ಲ. ಫೀ ಅನ್ನು ತುಂಬಲಾಗುವುದಿಲ್ಲವೆಂದೇ ಸಿಇಟಿ ಅಡ್ಮಿಷನ್ ಸಂದರ್ಭದಲ್ಲಿ ಸುಮಾರು 65–75 ಜನ ವಿದ್ಯಾರ್ಥಿಗಳು ನಮಗೆ ಸಾಧ್ಯವಿಲ್ಲವೆಂದು ವಾಪಸ್ ಹೋಗಿದ್ದು ತಮಗೆ ಗೊತ್ತಿರುವ ಸಂಗತಿ. ಮತ್ತೆ ಪಾರ್ಲಿಮೆಂಟ್‌ನಲ್ಲಿ ಈ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅಮೂಲಾಗ್ರವಾದ ಕಾನೂನನ್ನು ಇಡೀ ಭಾರತಕ್ಕೆ ಅನ್ವಯವಾಗುವಂತೆ ತರುವುದಕ್ಕೆ ಒತ್ತಾಯ ತರುತ್ತೇವೆ ಎನ್ನುವ ಮಾತನ್ನೂ ಕೂಡ ತಾವು ಹೇಳಿದಿರಿ, ಈ ಸಂದರ್ಭದಲ್ಲಿ ಚರ್ಚೆ ಪ್ರಾರಂಭವಾಗುವಾಗ, ಫೀ ಬಗ್ಗೆ ರಾಜ್ಯದ ಮೆಡಿಕಲ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಹೋಗುವ ಯುವಕ ಯುವತಿಯರಿಗೆ ಸರ್ಕಾರದ ನಿಲುವೇನೆಂಬುದನ್ನು ಸ್ಪಷ್ಟ ಮಾಡಬೇಕು, ಇಲ್ಲವಾದರೆ ಸರ್ಕಾರ ಆಯವ್ಯಯದಲ್ಲಿ ಈ ಬಡ ವಿದ್ಯಾರ್ಥಿಗಳಿಗಾಗಿ 65 ಕೋಟಿ ರೂಪಾಯಿಗಳನ್ನು ಪ್ರಾವಿಷನ್ ಮಾಡುತ್ತೇವೆಂದು ಹೇಳಬೇಕು. ಇದನ್ನು ಮಾಡದಿದ್ದರೆ ಇವತ್ತು ನಿಮ್ಮ ಈ ಹೇಳಿಕೆಯಿಂದ ಯಾರಿಗೂ ಸಮಾಧಾನವಾಗುವುದಿಲ್ಲ. ನಾನು ತಮ್ಮ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

4.40 ಪಿ.ಎಂ

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧ ಪಕ್ಷದ ನಾಯಕರೇ ಬೇಗನೆ ಕಾನೂನನ್ನು ನಾವು ತರುವೆವು. ಚರ್ಚೆ ವೇಳೆಯಲ್ಲಿ ಯಾವ ತರಹದ ಫೀ ಸ್ಟ್ರಕ್ಚರ್ ಮಾಡಬೇಕು ಅಂತ ಎಲ್ಲಾ ಕಡೆ

ಡೆಲಿಬರೇಶನ್ ಆಗಲಿ. ವಾದ ವಿವಾದದಲ್ಲಿ ಎಲ್ಲಾ ಬರುತ್ತದೆ. ಯಾಕೆಂದರೆ ನಿಮ್ಮನ್ನು ಬಿಟ್ಟು ನಾವೇನೂ ಮಾಡುವುದಕ್ಕೆ ಹೋಗುವುದಿಲ್ಲ. ನಾವೂ ನೀವೂ ಕೂಡಿ ಅದಕೊಂದು ಪ್ರತ್ಯೇಕ ಲೆಜಿಸ್ಲೇಶನ್ ತರೋಣ.

ಅಧ್ಯಕ್ಷರು : ನಿರ್ಣಯವನ್ನು ನಾಳೆ ಪ್ರಶ್ನೋತ್ತರ ಕಾಲ ಆದಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಬಜೆಟ್ ಮೇಲಿನ ಚರ್ಚೆ ಮುಂದುವರೆಯುವುದು.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮುಖ್ಯಮಂತ್ರಿಗಳು ಒಂದು ನಿರ್ಣಯವನ್ನು ಈ ಸದನದಲ್ಲಿ ಮೂವ್ ಮಾಡಿದ್ದಾರೆ. ಅದು ತುಂಬಾ ಸ್ವಾಗತಾರ್ಹ. ಆದರೆ ಫೀ ಸ್ಟ್ರಕ್ಚರ್ ಅದಕ್ಕಿಂತ ಇಂಪಾರ್ಟ್‌ಟೆಂಟ್ ಇದೆ. ಒಂದು ವೇಳೆ 100 ಪರ್ಸೆಂಟ್ ಸರ್ಕಾರದ ಕಡೆ ಸೀಟ್ ಇಟ್ಟುಕೊಂಡರೂ ಈ ಪೀಜಿನಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಏನು ಉಪಯೋಗವಾಗುವುದಿಲ್ಲ. ಒಂದೂವರೆಯಿಂದ ಎರಡು ಲಕ್ಷದ ರೂ. ತನಕ ಫೀ ಸ್ಟ್ರಕ್ಚರ್ ಇದೆ, ಮುರಗೋಡು ಕಮಿಟಿ ಯಾವ ಆಧಾರವಿಲ್ಲದೆ ಶಿಫಾರ್ಸು ಮಾಡಿದೆ. ಈ ಕಾಲೇಜಿಗೆ ಇಷ್ಟು, ಈ ಕಾಲೇಜಿಗೆ ಇಷ್ಟು ಎಂದು, ಅರ್ಥಾನೇ ಇಲ್ಲ ಅದು. It is most unscientific ನನಗೆ ಯಾವ ಡಾಕ್ಯುಮೆಂಟ್ ಸಿಕ್ಕಿಲ್ಲ, ಆದರೆ ಕೆಲವು ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡಿದಾಗ ಒಂದು ಇನ್‌ಸ್ಟ್ರುಮೆಂಟ್ ಇರುತ್ತದೆ, 20 ವರ್ಷದ ತನಕವೂ, ಅದು 50 ಸಾವಿರ, ಮತ್ತೊಂದು 25 ಸಾವಿರ ಹೀಗೆಲ್ಲಾ ಜಮಾ ಮಾಡಿ 1.70 ಲಕ್ಷ ರೂ. 1.80 ಲಕ್ಷ ರೂ. ಈ ತರಹ ಫೀ ಸ್ಟ್ರಕ್ಚರ್ ಹೆಚ್ಚು ಮಾಡಿದ್ದಾರೆ. ಸ್ಟಾಫ್ ಎಷ್ಟು ತೋರಿಸಿದ್ದಾರೆ ಅಷ್ಟು ಸ್ಟಾಫ್ ಇರುವುದಿಲ್ಲ, ಅಷ್ಟು ಸಂಬಳ ಕೊಡುವುದಿಲ್ಲ, ನಮ್ಮ ಗುಲ್ಬರ್ಗಾದಲ್ಲಂತೂ ನಿಮಗೆ ಗೊತ್ತಿದೆ, ಅಲ್ಲಿ ಸ್ಟಾಫ್, ಈವನ್ ಚಪ್ರಾಸಿ ಇವರಿಗೆಲ್ಲಾ ಮೂರು ಮೂರು ತಿಂಗಳು ಆದರೂ ಸಂಬಳ ಕೊಡುವುದಿಲ್ಲ, ಅದನ್ನೆಲ್ಲ ಲೆಕ್ಕದಲ್ಲಿ ತೋರಿಸಿ ಇವತ್ತು ಫೀ ಸ್ಟ್ರಕ್ಚರ್ ಹೆಚ್ಚು ಮಾಡಿದ್ದಾರೆ. ಆ ಫೀ ಸ್ಟ್ರಕ್ಚರ್ ಕಡಿಮೆ ಮಾಡದೇ ಹೋದರೆ, ತಿದ್ದುಪಡಿ ಮಾಡದೇ ಇದ್ದರೆ ಇದರಿಂದ ಏನೂ ಅರ್ಥ ಇಲ್ಲ, ಸರ್ಕಾರ ಅದರ ಬಗ್ಗೆ ಕೂಡ ಒಂದು ನಿರ್ಣಯ ತೆಗೆದುಕೊಳ್ಳಬೇಕು, ಮತ್ತು ಇವತ್ತು ಧೈರ್ಯದಿಂದ ನಮ್ಮ ಮುಖ್ಯಮಂತ್ರಿಗಳೇನು ನಿರ್ಣಯ ತೆಗೆದುಕೊಂಡಿದಾರೆ, ಕೋರ್ಟ್ ತಮ್ಮ ಮನಸ್ಸಿಗೆ ಬಂದದ್ದು ಹೇಳುತ್ತಾರೆ; ಅಂದರೆ it is not binding.

ಅಧ್ಯಕ್ಷರು : ಈ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ, ನಾಳೆ ಬೆಳಿಗ್ಗೆ ಪ್ರಶ್ನೋತ್ತರವಾದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಆಗ ತಾವು ಭಾಗವಹಿಸಬಹುದು.

ಶ್ರೀ ವೈಜನಾಥ ಪಾಟೀಲ್ : ಆಯಿತು.

11. ವಿತ್ತೀಯ ಕಾರ್ಯ ಕಲಾಪ

2004-05ನೇ ಆಯವ್ಯಯ ಮೇಲಿನ ಚರ್ಚೆ (ಮುಂದುವರೆದುದು)

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಕೂಡ ಸನ್ಮಾನ್ಯ ಅರ್ಥ ಸಚಿವರು ಬಹಳ ಹೆಚ್ಚೇನೂ ಮಾಡಿಲ್ಲ ಅಂತ ನಾನು ಭಾವಿಸುತ್ತೇನೆ. ನೀರಾವರಿ ವಲಯದಲ್ಲಿ ಕೂಡ ಕಳೆದ ಎರಡು ದಶಕಗಳಲ್ಲಿ ತಾವೂ ಇದ್ದೀರಿ ನಾನೂ ಇದ್ದೇನೆ. ಕಾವೇರಿಯಲ್ಲಿ ಆಗಿರುವ ಕೆಲಸ ಬಹಳ ಕಡಿಮೆ. 1987ನೇ ಇಸವಿಯಲ್ಲಿ ಏನು ಹೇಮಾವತಿ ಯೋಜನೆ ಆರಂಭವಾಯಿತು, ಇವತ್ತಿನವರೆಗೂ ತುಮಕೂರು ಜಿಲ್ಲೆಯಲ್ಲಿ, ತಮ್ಮ ಮಂಡ್ಯ ಜಿಲ್ಲೆ ಸುದ್ದಿ ನಾನು ಮಾತನಾಡುವುದಿಲ್ಲ, ಒಂದು ಎಕರೆಗೆ ನಾವು ನೀರು ಕೊಟ್ಟಿಲ್ಲ. ಕೆರೆಗಳಿಗೆ ನೀರು